# ವೇದಾಂತದ ದೃಷ್ಟಿಯಲ್ಲಿ ಬ್ರಹ್ಮತತ್ತ್ವ

ಸ್ವಾಮಿ ಅಮೃತಾನಂದ

**ತೈತ್ತಿರೀಯ** ಉಪನಿಷತ್ತಿನಲ್ಲಿ ಬ್ರಹ್ಮವನ್ನು ಎರಡು ರೀತಿಯಲ್ಲಿ ವರ್ಣಿಸಿರುವುದನ್ನು ಕಾಣುತ್ತೇವೆ. ಮೊದಲನೆಯದು ಅಪರೋಕ್ಷ ವಿಧಾನ ಅಥವಾ ನೇರ ವಿಧಾನ. ಇದು ಬ್ರಹ್ಮವು ಯಥಾರ್ಥವಾಗಿ ಹೇಗೆ ಇದೆಯೋ ಹಾಗೆಯೇ ತಿಳಿದುಕೊಳ್ಳುವ ವಿಧಾನ. ಈ ಬಗೆಯ ವರ್ಣನೆಯನ್ನು ಈ ಕೆಳಗಿನ ಮಂತ್ರ ಮತ್ತು ಇಂಥ ಕೆಲವು ಮಂತ್ರಗಳು ಮಾಡುತ್ತವೆ:

**ಓಂ ಬ್ರಹ್ಮವಿದಾಪ್ನೋತಿ ಪರಂ, ತದೇಷಾಭ್ಯುಕ್ತಾ, ಸತ್ಯಂ ಜ್ಞಾನಮನಂತಂ ಬ್ರಹ್ಮ**

"ಬ್ರಹ್ಮವನ್ನು ತಿಳಿದವನು ಬ್ರಹ್ಮವನ್ನು ಹೊಂದುತ್ತಾನೆ. ಈ ವಿಷಯದಲ್ಲಿ ಈ ಋಕ್ಕು(ವೇದ ವಾಕ್ಯ) ಹೇಳಲ್ಪಟ್ಟಿರುತ್ತದೆ – ಬ್ರಹ್ಮವು ಸತ್ಯ, ಜ್ಞಾನ, ಅನಂತ.." (ಬ್ರಹ್ಮಾನಂದವಲ್ಲೀ, ೧)

ಎರಡನೆಯ ವಿಧಾನವೆಂದರೆ ಪರೋಕ್ಷ ವಿಧಾನ. ಇದು ಬ್ರಹ್ಮವನ್ನು ಅದರ ಅಭಿವ್ಯಕ್ತರೂಪವಾದ ಪ್ರಪಂಚದ ಮೂಲಕ ತಿಳಿದುಕೊಳ್ಳುವ ವಿಧಾನ. ಈ ಬಗೆಯ ವರ್ಣನೆಯನ್ನು ಕೆಳಗಿನ ಮಂತ್ರ ಮತ್ತು ಇಂಥ ಕೆಲವು ಮಂತ್ರಗಳು ಮಾಡುತ್ತವೆ.

**ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ ಪ್ರಯಂತ್ಯಭಿಸಂವಿಶಂತಿ ತದ್ ವಿಜಿಜ್ಞಾಸಸ್ವ, ತದ್ ಬ್ರಹ್ಮೇತಿ**

"ಯಾವುದರಿಂದ ಈ ಪ್ರಾಣಿಗಳು ಹುಟ್ಟುವವೋ, ಹಾಗೆಯೇ ಹುಟ್ಟಿದವುಗಳು ಯಾವುದರಿಂದ ಜೀವಿಸುತ್ತವೆಯೋ ಮತ್ತು (ನಾಶವಾಗುವ ಸಮಯದಲ್ಲಿ) ಯಾವುದನ್ನು ಕುರಿತು ಹೋಗಿ ಪ್ರವೇಶಿಸುವವೋ ಅದನ್ನು ತಿಳಿದುಕೋ. ಅದು ಬ್ರಹ್ಮ." (ಭೃಗುವಲ್ಲೀ, ೧)

ಮೊದಲನೆಯ ವಿಧಾನವು ಬ್ರಹ್ಮದ ಸ್ವರೂಪಲಕ್ಷಣಗಳಾದ ಸತ್ಯ, ಜ್ಞಾನ ಮತ್ತು ಅನಂತತೆಯನ್ನು ವರ್ಣಿಸುತ್ತದೆ. ಎರಡನೆಯ ವಿಧಾನದಲ್ಲಿ ಎಲ್ಲಿಂದ ಎಲ್ಲ ಜೀವಿಗಳು ಜನ್ಮತಳೆದಿವೆಯೋ, ಜನ್ಮ ತಳೆದವು ಎಲ್ಲಿ ಆಶ್ರಯವನ್ನು ಪಡೆದಿರುವುವೋ ಹಾಗೆಯೇ ಅವೆಲ್ಲವೂ ಕಡೆಯಲ್ಲಿ ಎಲ್ಲಿಗೆ ಹಿಂದಿರುಗುವುವೊ ಅದು ಬ್ರಹ್ಮ ಎಂದು ವರ್ಣಿಸಲಾಗಿದೆ. ಬ್ರಹ್ಮವು ಸರ್ವವ್ಯಾಪಕವಾದದ್ದು ಎನ್ನುವುದು ಇದರಿಂದ ಗೊತ್ತಾಗುತ್ತದೆ.

ಈ ಜಗತ್ತಿನಲ್ಲಿ ಕಾಣಬರುವುದೆಲ್ಲವೂ ಸತ್ಯವಲ್ಲ ಎನ್ನುವುದು ವೇದಾಂತದ ಅಭಿಮತ. ಇವುಗಳ ಹಿಂದೆ ಇರುವ ಕೇಂದ್ರ ತತ್ತ್ವವೇ ಬ್ರಹ್ಮ. ಅದು ಮಾತ್ರ ಸತ್ಯವಾದುದು. ಯಾವುದು ನಿತ್ಯವಾಗಿ ಇರುವುದೋ ಅದನ್ನೇ ಪರತತ್ತ್ವವೆಂದು ಬಣ್ಣಿಸುತ್ತೇವೆ. ನಿತ್ಯವಾಗಿರುವುದರಿಂದ ಬ್ರಹ್ಮವೇ ಪರತತ್ತ್ವವೆಂದು ಒಪ್ಪಿಕೊಳ್ಳಬೇಕು. ಇದು ಕಾಲಾತೀತವೂ ಕೂಡ. ಎಲ್ಲ ನಾಮರೂಪಗಳೂ ಅದರ ಅನಿರ್ವಚನೀಯ ಮಾಯೆಯಿಂದಲೇ ಒಡಮೂಡಿವೆ. ಆದರೆ, ಬ್ರಹ್ಮನಲ್ಲಿ ಯಾವ ಬಗೆಯ ವಿಕಾರವೂ ಉಂಟಾಗದು. ಆದ್ದರಿಂದ ಅದು ಅಮರ್ತ್ಯ ಅಥವಾ ಅವಿನಾಶಿ. ಉಳಿದೆಲ್ಲವೂ ವಿಕಾರವನ್ನು ಹೊಂದುವವು. ಆದ್ದರಿಂದ ಅವು ಮರ್ತ್ಯ ಅಥವಾ ನಾಶಹೊಂದುವ ಗುಣವುಳ್ಳವು.

**ಜೀವೋ ಬ್ರಹ್ಮೈವ ನಾಪರಃ** – ಪಾರಮಾರ್ಥಿಕವಾಗಿ ನೋಡಿದಾಗ, ಜೀವನೂ ಬ್ರಹ್ಮನೇ. ಅವನು ಬ್ರಹ್ಮಮಾಯೆಯ ಬಂಧನಕ್ಕೆ ಸಿಲುಕಿ ನರಳುತ್ತಾನೆ. ಆದರೆ ಅವನು ತನ್ನನ್ನು ಅದರಿಂದ ಬಿಡಿಸಿಕೊಳ್ಳಬಹುದು. ಏಕೆಂದರೆ, ಅವನ ನೈಜಸ್ವರೂಪವು ಮಾಯೆಯಿಂದ ಬಾಧಿತವಾಗಿರುವುದಿಲ್ಲ. ಈ ಬಂಧನದಿಂದ ಬಿಡಿಸಿಕೊಂಡಾಗ ಸಿಗುವ ಸ್ವಾತಂತ್ರ್ಯವನ್ನೇ 'ಮೋಕ್ಷ' ವೆಂದು ಕರೆಯುತ್ತೇವೆ. ಜೀವಿಯು ತಾನು ಮುಕ್ತನಾಗಬೇಕೆಂದು ದೃಢವಾಗಿ ನಿಶ್ಚಯಿಸಿದಲ್ಲಿ, ಯಾರೂ ಅವನನ್ನು ತಡೆಯಲಾರರು. ಇದೇ ವೇದಾಂತದ ಸಂದೇಶ. ನಾವು ವಸ್ತುತಃ ಬ್ರಹ್ಮನೊಡನೆ ಏಕೀಭಾವವನ್ನು ಹೊಂದಿದ್ದೇವೆ. ನಮ್ಮ ಮನಸ್ಸು ಪರಿಶುದ್ಧವಾಗಿದ್ದರೆ, ನಾವು ಅದನ್ನು ಸುಲಭವಾಗಿ ಅರಿತುಕೊಳ್ಳಬಲ್ಲೆವು. ಪ್ರಾಪಂಚಿಕ ಆಕರ್ಷಣೆಗಳು ನಮ್ಮ ಮೇಲೆ ಪ್ರಾಬಲ್ಯವನ್ನು ಬೀರಲಾರದಂತೆ ಚಿತ್ತಶುದ್ಧಿಯು ಅವುಗಳನ್ನು ತಡೆಹಿಡಿಯುತ್ತದೆ.

ಮೋಕ್ಷವನ್ನು ಗಳಿಸಿಕೊಳ್ಳಲು ಕೈಗೊಳ್ಳಬೇಕಾದ ಮಾರ್ಗಗಳನ್ನು ಸಾಧನಗಳು ಎನ್ನುತ್ತೇವೆ. ವಿವಿಧ ದರ್ಶನ ಪದ್ಧತಿಗಳಲ್ಲಿ ಅವು ಬಗೆಬಗೆಯಾಗಿವೆ. ಪೂರ್ವ ಮೀಮಾಂಸಕರು ಸುಖವನ್ನು ಪಡೆಯುವ ಯುಕ್ತ ಮಾರ್ಗವೆಂದರೆ, ಯಜ್ಞಯಾಗಾದಿಗಳನ್ನು ಆಚರಿಸುವುದು ಎಂದು ನಂಬುತ್ತಾರೆ. ಸಾಂಖ್ಯರೇ ಮೊದಲಾದವರು ಸತ್ಯದ ಅರಿವೇ ಮೋಕ್ಷವೆಂದು ನಂಬುತ್ತಾರೆ. ಸತ್ಯವನ್ನು ಕವಿದಿರುವ ಅಜ್ಞಾನದ ಆವರಣವನ್ನು ತೆಗೆದುಹಾಕುವುದಕ್ಕೆ ವೇದಾಂತವು ಮಹತ್ವವನ್ನು ನೀಡುತ್ತದೆ. ಶ್ರೀಶಂಕರಾಚಾರ್ಯರು, ಇದನ್ನು ಸಾಧಿಸಲೆಂದೇ ಸಾಧನ ಚತುಷ್ಟಯವನ್ನು (ನಾಲ್ಕು ವಿಧವಾದ ಸಾಧನೆ) ಬೋಧಿಸಿದ್ದಾರೆ. ಅವುಗಳೆಂದರೆ, ೧. **ನಿತ್ಯಾನಿತ್ಯ ವಸ್ತು ವಿವೇಕ** – ನಿತ್ಯ ಯಾವುದು ? ಅನಿತ್ಯ ಯಾವುದು? ಎಂದು ಬೇರ್ಪಡಿಸಿ ನೋಡುವ ಬುದ್ಧಿ ೨. **ಇಹಾಮುತ್ರಫಲ ಭೋಗ ವಿರಾಗ** – ನಾವು ನೋಡುವ ಈ ಜಗತ್ತಿನಲ್ಲಿ ಮತ್ತು ಪರಲೋಕದಲ್ಲಿ ದೊರಕಬಹುದಾದ ಎಲ್ಲ ಬಗೆಯ ಭೋಗಗಳಲ್ಲಿ ವೈರಾಗ್ಯ ೩. **ಶಮದಮಾದಿ ಷಟ್ಕ ಸಂಪತ್ತಿ** : ಶಮ, ದಮ, ಉಪರತಿ, ತಿತೀಕ್ಷಾ, ಶ್ರದ್ಧಾ, ಸಮಾಧಾನ ೪. **ಮುಮುಕ್ಷುತ್ವ:** ಮೋಕ್ಷವನ್ನು ಪಡೆದುಕೊಳ್ಳಲೇಬೇಕೆಂಬ ತೀವ್ರವಾದ ಆಸಕ್ತಿ.

ಈ ಸಂದರ್ಭದಲ್ಲಿ, ಶ್ರೀಗೌಡಪಾದರು, ಪ್ರಪಂಚವು ಬರಿಯ ತೋರಿಕೆ, ಕಣ್ಕಟ್ಟು ಅಥವಾ ಇಂದ್ರಜಾಲ ಎಂದು ಭಾವಿಸಿಕೊಂಡು ತಿರಸ್ಕರಿಸಬೇಕು ಎಂದು ಹೇಳುತ್ತಾರೆ. ಇದರಿಂದ ಒಡನೆಯೇ ಇಲ್ಲಿಯೇ ಬಂಧನದಿಂದ ಮುಕ್ತರಾಗಲು ಸಾಧ್ಯವೆಂದೂ ಹೇಳುತ್ತಾರೆ. ಆದರೆ ಶ್ರೀಶಂಕರರು ಪ್ರಪಂಚವನ್ನು ಭ್ರಮೆಯೆಂದು ಏಕಾಏಕಿ ತಿರಸ್ಕರಿಸಲಾಗದು ಎನ್ನುವುದನ್ನು ಒಪ್ಪಿಕೊಳ್ಳುತ್ತಾರೆ. ವ್ಯವಹಾರ ದೃಷ್ಟಿಯಿಂದ ಈ ಪ್ರಪಂಚದಿಂದಲೂ ಪ್ರಯೋಜನವಿದೆ. ಇದು ಬರಿಯ ಭ್ರಮೆಯಲ್ಲ. ಆದರೆ ಪ್ರಪಂಚವು ಸದಾ ಬದಲಾಗುತ್ತಿರುವುದರಿಂದ, ನಮ್ಮಲ್ಲಿ ಭಯ, ಸಂಕಷ್ಟ ಮತ್ತು ಮೃತ್ಯುಗಳನ್ನು ತಂದೊಡ್ಡುತ್ತದೆ. ಉಪನಿಷತ್ತುಗಳು ಹೇಳುವಂತೆ ಬ್ರಹ್ಮವು ನಿತ್ಯಾನಂದ ಸ್ವರೂಪವಾಗಿದೆ. **ಬ್ರಹ್ಮವಿದ್ ಬ್ರಹ್ಮೈವ ಭವತಿ** – ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ. ಅರಿತೋ ಅರಿಯದೆಯೋ ನಾವೆಲ್ಲರೂ ನಿತ್ಯಾನಂದವನ್ನು ಪಡೆಯಲು ಪ್ರಯತ್ನಿಸುತ್ತಿದ್ದೇವೆ. ಆದರೆ ಅದನ್ನು ಸಾಧಿಸಲು ಸರಿಯಾದ ವಿಧಾನ ನಮಗೆ ತಿಳಿದಿಲ್ಲ. ಅಂತಹ ಮಾರ್ಗವನ್ನು ವೇದಾಂತವು ನಮಗೆ

ತೋರಿಸಿಕೊಡುತ್ತವೆ. ವಿವೇಕಚೂಡಾಮಣಿ ಮೊದಲಾದ ಪ್ರಕರಣ ಗ್ರಂಥಗಳು ಮತ್ತು ಬ್ರಹ್ಮಸೂತ್ರ ಭಾಷ್ಯವು ಬ್ರಹ್ಮನ ನಿರ್ಗುಣ ಸ್ವರೂಪವನ್ನು ವಿವರಿಸಿ ಹೇಳುತ್ತವೆ. ಇದೇ ಬ್ರಹ್ಮನ ಸ್ವರೂಪ ಲಕ್ಷಣ. ಇದನ್ನು ತಿಳಿಯುವ ವಿಧಾನವೇ ಅಪರೋಕ್ಷ ವಿಧಾನ ಅಥವಾ ನೇರವಾದ ವಿಧಾನ.

ಆದರೆ ಅವತಾರಗಳು ಈಶ್ವರ (ಸಗುಣ ಬ್ರಹ್ಮ) ಮತ್ತು ಲೀಲೆಯ ಪ್ರತೀಕಗಳಾಗಿವೆ. ಈಶ್ವರನು ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಪ್ರಲಯಗಳಿಗೆ ಕಾರಣನು. ಅವನು ಸರ್ವಜ್ಞತ್ವ, ಸರ್ವಶಕ್ತಿತ್ವ, ಸರ್ವವ್ಯಾಪಕತ್ವ ಮೊದಲಾದ ಗುಣಗಳನ್ನು ಹೊಂದಿದ್ದಾನೆ. ಅವನು ಗುಣಾತೀತ ವೆಂದು ಪರಿಗಣಿಸಲ್ಪಡುವ ನಿರ್ಗುಣ ಸ್ವರೂಪನಲ್ಲ. ಗುಣಗಳನ್ನು ಹೊಂದಿದಂತೆ ಭಾಸವಾಗುವ ಬ್ರಹ್ಮ. ಆದ್ದರಿಂದಲೇ ಅವನನ್ನು ಸಗುಣ ಬ್ರಹ್ಮವೆಂದು ಕರೆಯುತ್ತೇವೆ. ಇಂತಹ ಈಶ್ವರನ ಉಪಾಸನೆ ಮತ್ತು ಅವನಿಂದ ಜ್ಞಾನವನ್ನು ಪಡೆಯುವುದು ಕೂಡ ಶಾಸ್ತ್ರೋಕ್ತವಾದ ಸಾಧನಾ ಮಾರ್ಗವಾಗಿದೆ. ಭಗವದ್ಗೀತೆ, ಅಧ್ಯಾತ್ಮ ರಾಮಾಯಣ ಮತ್ತು ಶ್ರೀಮದ್ ಭಾಗವತಗಳಂತಹ ಧರ್ಮಗ್ರಂಥಗಳಲ್ಲಿ ಜ್ಞಾನ ಮತ್ತು ಭಕ್ತಿಗಳ ಸಮನ್ವಯವನ್ನು ಕಾಣಬಹುದು. ಅವು ಜಗನ್ನಿಯಾಮಕನಾದ ಪರಮಾತ್ಮನ ಮಹತ್ವವನ್ನು ಹಾಡಿ ಹೊಗಳುತ್ತವೆ. ಈ ಬಗೆಯಲ್ಲಿ ಭಗವಂತನ ಉಪಾಸನೆ ಮಾಡುವುದರಿಂದ ಚಿತ್ತಶುದ್ಧಿಯನ್ನು ಮತ್ತು ಜಗತ್ತಿನಲ್ಲಿ ಕಾಣಬರುವ ವಿಷಯವಸ್ತುಗಳಲ್ಲಿ ವೈರಾಗ್ಯ ಭಾವನೆಯನ್ನು ಸಾಧಕನು ಹೊಂದುತ್ತಾನೆ. ನಂತರ ಅವನು ಸಂನ್ಯಾಸ ಪಥವನ್ನು ಕೈಗೊಂಡು, ಜ್ಞಾನಮಾರ್ಗವನ್ನು ತೀವ್ರವಾಗಿ ಅನುಸರಿಸುತ್ತಾನೆ.

ಈಗ ನಾವು ಆತ್ಮ ಅಥವಾ ಬ್ರಹ್ಮ ಪ್ರಾಪ್ತಿಗಾಗಿ ಪರೋಕ್ಷ ಮತ್ತು ಅಪರೋಕ್ಷ ವಿಧಾನಗಳಲ್ಲಿ ವಿಧಿಸಲಾಗಿರುವ ಹಂತಗಳ ಬಗ್ಗೆ ತಿಳಿದುಕೊಳ್ಳೋಣ.

ನೇರ ವಿಧಾನದಲ್ಲಿ ಶ್ರುತಿಯಲ್ಲಿ ಹೇಳಿರುವ 'ನೇತಿ, ನೇತಿ' ಮಾರ್ಗವನ್ನು ನಾವು ಅನುಸರಿಸುತ್ತೇವೆ. ಚೆನ್ನಾಗಿ ವಿಶ್ಲೇಷಿಸಿ, ಅನಾತ್ಮ ವಸ್ತುಗಳೆಲ್ಲವನ್ನೂ ತ್ಯಜಿಸುವುದು ಈ ವಿಧಾನದ ವೈಶಿಷ್ಟ್ಯ. ಆತ್ಮ–ಬ್ರಹ್ಮರಲ್ಲಿ ಭೇದವಿಲ್ಲ. ಎರಡೂ ಚೈತನ್ಯ ಸ್ವರೂಪ ಉಳ್ಳವುಗಳೇ ಆಗಿವೆ. ಹೀಗಾಗಿ, ನಮ್ಮ ವ್ಯಕ್ತಿತ್ವದ ನೈಜಸ್ವರೂಪವಾದ ಆತ್ಮವನ್ನು ಅರಿಯುವುದು ಬ್ರಹ್ಮವನ್ನು ಅರಿತಂತೆಯೇ ಆಗುತ್ತದೆ. ಆತ್ಮವೆಂದರೆ ಎಲ್ಲಕ್ಕಿಂತಲೂ ಅಂತರಂಗದಲ್ಲಿರುವ ಜೀವಿಯ ವ್ಯಕ್ತಿತ್ವದ ಸಾರಭೂತ ತತ್ತ್ವ. ಅದನ್ನು ಕಂಡುಹಿಡಿಯಲು ನಾವು ನಮ್ಮ ನಮ್ಮಂತರಂಗದಲ್ಲಿ ಆಧ್ಯಾತ್ಮಿಕ ಪಯಣವನ್ನು ಆರಂಭಿಸಬೇಕು. ಪಂಚಕೋಶಗಳಿಗಿಂತ (ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ, ಆನಂದಮಯ ಕೋಶ) ಭಿನ್ನವಾದ ಮತ್ತು ಜಾಗ್ರತ್, ಸ್ವಪ್ನ, ಸುಷುಪ್ತಿಗಳೆಂಬ ಅರಿವಿನ ಮೂರು ಅವಸ್ಥೆಗಳ ಸಾಕ್ಷಿಯಾಗಿರುವ ಆತ್ಮನ ಅರಿವಿನಲ್ಲಿಯೇ, ಈ ಪಯಣದ ಪರ್ಯವಸನವಾಗುವುದು. ಆತ್ಮನು ಅವುಗಳ ಸಾಕ್ಷಿಯಷ್ಟೇ; ಅವುಗಳಿಂದ ಭಿನ್ನವಾದವನು ಅವನು. ಹಾಗೆಯೇ ಕೋಶಗಳ ವಿಷಯದಲ್ಲೂ ಕೂಡ. ಆತ್ಮವು ಅವುಗಳೆಲ್ಲವನ್ನೂ ಮೀರಿದ್ದು. ಆತ್ಮವನ್ನು ಪ್ರತ್ಯಗಾತ್ಮವಾಗಿ ಸಾಕ್ಷಾತ್ಕರಿಸಿಕೊಳ್ಳಬಹುದು. ಪ್ರತ್ಯಕ್ ಎಂದರೆ ಒಳಗಿರುವುದು. ನಮ್ಮ ಸ್ವರೂಪವೇ ಆಗಿರುವುದು ಎಂದರ್ಥ. ಬ್ರಹ್ಮವು ಇಡೀ ವಿಶ್ವಕ್ಕೆ ಆಧಾರಭೂತವಾದ ತತ್ತ್ವವಾಗಿದೆ. ಅದನ್ನೂ ನಮ್ಮ ಆತ್ಮವೆಂತಲೇ ನಾವು ಸಾಕ್ಷಾತ್ಕರಿಸಿಕೊಳ್ಳಬಹುದು. ಆಗ ಪ್ರತ್ಯಗಾತ್ಮರೂಪವಾದ ಚೈತನ್ಯ ವಸ್ತುವೂ, ಬ್ರಹ್ಮರೂಪವಾದ ಚೈತನ್ಯ ವಸ್ತುವೂ ಒಂದೇ ಎಂಬ ಅನುಭವವಾಗುತ್ತದೆ. ಈ ಅಖಂಡ ದೃಷ್ಟಿಯೇ ಅದ್ವೈತ ದೃಷ್ಟಿ. ಇದನ್ನೇ **ಚಿತ್** ಅಥವಾ ಪರಿಶುದ್ಧ ಪ್ರಜ್ಞೆ ಅಥವಾ ಅರಿವು ಎನ್ನುತ್ತೇವೆ. ತನ್ನಂತರಂಗದಲ್ಲಿರುವುದು ಇದೇ ಆತ್ಮ ಎಂದು ತಿಳಿದವನು ಎಲ್ಲೆಲ್ಲಿಯೂ ಆತ್ಮವನ್ನೇ ಕಾಣುತ್ತಾನೆ. ಅವನು ಪ್ರಪಂಚವನ್ನು ನೋಡುವ ದೃಷ್ಟಿಯೇ ಬದಲಾವಣೆಯಾಗುತ್ತದೆ. ಆತ್ಮನನ್ನು ಕವಿದಿರುವ ಅಜ್ಞಾನವು ಎಲ್ಲಾ ಕಾಲಕ್ಕೂ ಕಳೆದು ಹೋಗುತ್ತದೆ. ಚಿತ್ತಶುದ್ಧಿಯನ್ನು ಗಳಿಸಿದ ನಂತರವೇ ಮೇಲಿನ ಆಧ್ಯಾತ್ಮಿಕ ಸಾಧನೆಯು ಸಾಧ್ಯವಾಗುತ್ತದೆ. ಚಿತ್ತಶುದ್ಧಿಯಿಲ್ಲದೆ, ಜ್ಞಾನದ ಅನಾವರಣವಾಗದು.

ಅದಲ್ಲದೆ, ಹಂತ ಹಂತವಾಗಿ ಹೋಗುವ ವ್ಯವಸ್ಥಿತ ಸಾಧನಾ ಮಾರ್ಗವೂ ಒಂದಿದೆ. ಬಾಲಕನಾಗಿದ್ದಾಗಲೇ, ಒಬ್ಬನು ವೇದ–ವೇದಾಂತಗಳ ಅಧ್ಯಯನವನ್ನು ಆರಂಭಿಸುತ್ತಾನೆ. ಗುರುಕುಲದಲ್ಲಿ ಹನ್ನೆರಡು ವರ್ಷಗಳ ಕಾಲ ಕಳೆದು, ಸ್ನಾತಕನಾಗಿ ಮನೆಗೆ ಹಿಂದಿರುಗುತ್ತಾನೆ. ನಂತರ ವಿವಾಹವಾಗಿ ಗೃಹಸ್ಥಧರ್ಮವನ್ನು ಸ್ವೀಕರಿಸುತ್ತಾನೆ. ತನ್ನ ಕುಟುಂಬದ ಸಂಪ್ರದಾಯಗಳನ್ನು ಕಾಯ್ದುಕೊಂಡು ಹೋಗಬಲ್ಲ ಪುತ್ರನನ್ನು ಪಡೆದ ಮೇಲೆ, ತನ್ನ ಪತ್ನಿಯೊಡಗೂಡಿಯೋ, ಒಂಟಿಯಾಗಿಯೋ, ಕಾಡಿಗೆ ತೆರಳುತ್ತಾನೆ. ಅಲ್ಲಿ ತಾನು ಗೃಹಸ್ಥನಾಗಿದ್ದಾಗ ಆರಂಭಿಸಿದ ಸಗುಣ ಬ್ರಹ್ಮ ಉಪಾಸನೆಯನ್ನು ಸಂಪನ್ನಗೊಳಿಸುತ್ತಾನೆ. ಈ ರೀತಿ ಬಾಹ್ಯ ಪ್ರಪಂಚದಿಂದ ದೂರವಿದ್ದುಕೊಂಡು, ಏಕಾಂತ ಜೀವನವನ್ನು ನಡೆಸಿದ ಮೇಲೆ ಸಂನ್ಯಾಸ ಜೀವನವನ್ನು ನಡೆಸಲು ಆರಂಭಿಸುತ್ತಾನೆ. ಸಂನ್ಯಾಸಿಗೆ ಮೂರು ಪ್ರಮುಖ ಸಾಧನೆಗಳನ್ನು ಶ್ರುತಿಯು ವಿಧಿಸಿದೆ. **ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ** – ಮೊದಲು ಅವನು ಆತ್ಮನ ಬಗ್ಗೆ ಕೇಳುತ್ತಾನೆ. ನಂತರ ತಾನು ಕೇಳಿದ ಉಪನಿಷತ್ತಿನ ಮಾತುಗಳ ಹಿಂದಿರುವ ಅರ್ಥವನ್ನು ಮನನ ಮಾಡುತ್ತಾನೆ. ಅದರಿಂದ ಅವನಲ್ಲಿದ್ದಿರಬಹುದಾದ ಅನುಮಾನಗಳೆಲ್ಲವೂ ನಾಶವಾಗುತ್ತವೆ. ತಾನು ಅನ್ವೇಷಿಸುತ್ತಿರುವ ವಸ್ತು (ಬ್ರಹ್ಮ) ಸ್ಪಷ್ಟಗೊಂಡಾಗ, ಅದರ ಪರಿಪೂರ್ಣ ಸ್ವರೂಪದ ಸಂಪೂರ್ಣ ಅರಿವಿಗಾಗಿ ಧ್ಯಾನ ಮಾಡುತ್ತಾನೆ. ಆಗ ಅವನಿಗೆ ಬ್ರಹ್ಮವು ತನ್ನ ಅಂತರಾತ್ಮನೆಂಬ ಅರಿವು ಉಂಟಾಗುತ್ತದೆ. ಇದರಿಂದ ಅವನು ಮುಕ್ತನಾಗುತ್ತಾನೆ.

**ಈಶ್ವರಾನುಗ್ರಹಾದೇವ ಪುಂಸಾಂ ಅದ್ವೈತ ವಾಸನಾ**– 'ಈಶ್ವರನ ಅನುಗ್ರಹದಿಂದಲೇ ಒಬ್ಬನಿಗೆ ಅದ್ವೈತ ಭಾವನೆಯು ಬರುತ್ತದೆ.' ಇಲ್ಲಿಯವರೆಗೆ ಅವನು ಈಶ್ವರನ (ಸುಗುಣ ಬ್ರಹ್ಮ) ಆರಾಧನೆಯನ್ನು ಮಾಡಿಕೊಂಡು ಬಂದಿದ್ದನಷ್ಟೆ. ಆ ಭಗವಂತನ ಅನುಗ್ರಹವೇ ಅವನಿಗೆ ಸಮ್ಯಕ್ ಜ್ಞಾನವನ್ನು ತಂದುಕೊಡುತ್ತದೆ. ನೂತನ ದೃಷ್ಟಿಯು ಅವನಲ್ಲಿ ಮೂಡುತ್ತದೆ. ಅವನು ಬ್ರಹ್ಮತತ್ತ್ವವನ್ನು ಎಲ್ಲೆಲ್ಲಿಯೂ ಕಾಣುತ್ತಾನೆ. **ನೇಹ ನಾನಾಸ್ತಿ ಕಿಂಚನ** – ' ಇಲ್ಲಿ ಬೇರೆ ಏನೂ ಇಲ್ಲ' ಬ್ರಹ್ಮವನ್ನು ಬಿಟ್ಟರೆ ಬೇರೆ ಯಾವ ತತ್ತ್ವ ಅಥವಾ ವಸ್ತು ಇಲ್ಲವೆಂದು ಅರಿಯುತ್ತಾನೆ. ಅವನನ್ನು ಆಕರ್ಷಿಸುತ್ತಿದ್ದ ಜಗತ್ತಿನ ವಿಷಯ ವಸ್ತುಗಳು ಬರಿಯ ನೆರಳಿನಂತೆ ಅವನಿಗೆ ತೋರುತ್ತವೆ; **ಬ್ರಹ್ಮ ಸತ್ಯಂ ಜಗನ್ಮಿಥ್ಯಾ** – 'ಬ್ರಹ್ಮ ಸತ್ಯ ಜಗತ್ತು ಮಿಥ್ಯೆ' ಎಂಬ ಯಥಾರ್ಥ ಜ್ಞಾನ ಆಗ ಉಂಟಾಗುತ್ತದೆ. ▪